475

ಮೈಸೂರ ಗಿಜಿಟ.

ಸಂ. XXXI.] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 42.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 22, ಸ್ಯ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಫ್ಟ್ರೋಲರವರು, ಪಬ್ಲಿಕ್ ವರ್ಕಸ್ ಆಫಿಸರ್‌ಗಳು, ಫಾರೆಸ್ಟ್ರು, ರೆಜಿಸ್ಟ್ರೇಷ್ ವ ಯಡ್ಯುಕೇಷ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ ಜಡ್ಜಿರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೋಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ರು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಆಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್‌ಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾ॥ 23ನೇ ಸೆಪ್ಟಂಬರ್ 1896.

ನಂ. 4126.—ಲೋ. ಫಂ. 65.—96, ಸ್ಯ 1894ನೇ ಇಸವಿಯ ಮೈಸೂರ್ ಲ್ಯಾಂಡ್ ಅಕ್ವಿಜಿಷ್ಷ ರೆಗ್ಯುಲೇಷನಿನ 6ನೇ ಸೆಕ್ಷ್ಷ ಅನುಸರಿಸಿ, ಇದರಡಿ ಕಂಡ ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ, ಗುಂಡ್ಲು ಪೇಟೆ ಟವನಿನಲ್ಲಿ ಕುರುಬರ ಬೀದೀ ಸಮೀಪ ವೊಂದು ರಸ್ತೆಯನ್ನು ವಿಸ್ತರಿಸುವ ಬಗ್ಯಾಗಿ ಬೇಕಾಗಿರುತ್ತೆ :—

ಡಿಸ್ಟ್ರಿಕ್ಟು—ಮೈಸೂರು
ತಾಲ್ಲೂಕು—ಗುಂಡ್ಲು ಪೇಟೆ
ಹೋಬ್ಳಿ—ಕಸಬಾ
ಗ್ರಾಮ—ಗುಂಡ್ಲು ಪೇಟೆ ಟೌನ್

ಅನುಭವದಾರ—ಗಾಣಿಗರ ಪುಟ್ಟಶೆಟ್ಟಿ.
ಸರ್ವೇನಂ.—ಮುನಿಸಿಪಲ್ ಸರಹದ್ದಿನಲ್ಲಿರುವೆ ಜಮೀನ್.
ವಿಸ್ತೀರ್ಣ—ಪೂರ್ವ ಪಶ್ಚಿಮ 30 ಗಜಗಳು, ಉತ್ತರ ದಕ್ಷಿಣ—105 ಚದುರ ಗಜಗಳು. ಬೇರೀಜು—ಇಲ್ಲ.

ಚಕ್ಕುಬಂದಿ—
ಉತ್ತರಕ್ಕೆ—ಕುರುಬರಕೆರೆ ರಸ್ತೆ
ದಕ್ಷಿಣಕ್ಕೆ—ನೀಲಗಿರೀ ರಸ್ತೆ
ಪಶ್ಚಿಮಕ್ಕೆ—ದೊಡ್ಡಮಾದಶೆಟ್ಟಿ ಮನೆ
ಪೂರ್ವಕ್ಕೆ—ಮಾದಶೆಟ್ಟರ ಅಂಗಡಿ, ಭಾವಿ ವಗೈರೆ

ತಾರೀಖು 30ನೇ ಸೆಪ್ಟಂಬರ್ 1896.

ನಂ. 4509.—ಜು. 495, ಅಸಿಸ್ಟೆಂಟ್ ಗವರ್ನಮೆಂಟ್ ಅಡ್ವೊಕೇಟರ ಉದ್ಯೋಗವು ಮೌಕೂಫ್ ಮಾಡಲ್ಪಟ್ಟಿರುವದರಿಂದ, 1892ನೇ ಏಪ್ರಿಲ್ 29ನೇ ಮಾರ್ಕ್ಕಂ 47ನೇ ನಂಬರ್ ಇಸ್ತಿಹಾರ್‌ನಾಮೆ ಅನುಸರಿಸಿ, ಅಸಿಸ್ಟೆಂಟ್ ಗವರ್ನಮೆಂಟ್ ಅಡ್ವೊಕೇಟರಿಗೆ ಕ್ರಿಮಿನಲ್ ಆಪ್ಪೀಲ್‌ಗಳು ವಗೈರೆಗಳಲ್ಲಿ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 422 ವ 526ನೇ ಸೆಕ್ಷನ್‌ಗಳ ಮೇರೆ ಕೊಡಲ್ಪಡಬೇಕಾದ ದರೋಬಸ್ತು ನೋಟಿಸುಗಳೂ ಈ ಲಾಗಾಯತು ಮೈಸೂರ್ ಗವರ್ನಮೆಂಟ್ ಅಡ್ವೊಕೇಟರವರಿಗೆ ಕೊಡಲ್ಪಡತಕ್ಕದ್ದೆಂದು ಗವರ್ನಮೆಂಟಿನವರು ಅಪ್ಪಣೆ ಕೊಡುತ್ತಾರೆ.

ತಾರೀಖು 23ನೇ ಸೆಪ್ಟಂಬರ್ 1896.

ನಂ. 3327.—ಯಕ್ಸೈ. 121, ಸ್ಯ 1895ನೇ ಇಸವಿ ಡಿಸೆಂಬರ್ 11ನೇ ಮಾರ್ಕ್ಕಂ 5508.—ಯಕ್ಸೈ. 182ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ತಿದ್ದುಪಡಿಯಾದ ಮೇರೆ 1892ನೇ ಮಾರ್ಚಿ 30ನೇ ಮಾರ್ಕ್ಕಂ 495ನೇ ನಂಬರ್ ಇಸ್ತಿಹಾರ್‌ನಾಮೆ ಅನುಸರಿಸಿ, ಫಾಯಿಷ್ ಮಾಡಲ್ಪಟ್ಟ ರೂಲ್ಸಿನ XXIನೇ ರೂಲ್ 5ನೇ ಕ್ಲಾಜಿನ (3)ನೇ ಸಬ್ ಕ್ಲಾಜಿಗೆ ಈ ಕೆಳಗೆ ಕಂಡದ್ದನ್ನ ಬದಲಾಗಿ ಶೇರಿಸಲ್ಪಡತಕ್ಕದ್ದೆಂದು ಮೈಸೂರ್ ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ:—

"(3) ಲೈಸೆನ್ಸಿದಾರನಿಂದ ಯಿಡಲ್ಪಟ್ಟ ತೇವಣಿ ಮೊಬಲಗು, ಇಜಾರೆ ವಾಯಿದೆಯ ಆಖೈರ್ ಎರಡು ಮಾಹಿಗಳಲ್ಲಿ ಹೊವತಿ "ಯಾಗಬೇಕಾದ ಖಿಸ್ತುಗಳಿಗಾಗಿ, ತೆಗದುಕೊಳ್ಳಲ್ಪಡತಕ್ಕದ್ದು. ಪರಂತು ಮೇಲ್ಕಂಡ (2)ನೇ ಸಬ್ ಕ್ಲಾಜಿನ ನಿಯಮಗಳನುಸರಿಸಿ, "ಇಜಾರೆಯು ದುಸರಾ ಹರಾಜ್ ಯಾ ರದ್ದು ಮಾಡಲ್ಪಟ್ಟಾಗ, ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮ್ಮಿಷನರವರ ಯುಕ್ತಾನುಸಾರ "ದಂಡವಾಗಿ ತೆಗೆದುಕೊಳ್ಳಲ್ಪಡಬಹುದು. ಅಥವಾ ತಪ್ಪಿ ಹೋದ ಇಜಾರೆದಾರನಿಂದ ಬರಬೇಕಾದ ಬಾಕೀಗೂ ಮತ್ತು ಇಜಾರೆಯು ಪುನ "ಶ್ಚ ಹರಾಜ್ ಮಾಡಲ್ಪಟ್ಟದ್ದರಿಂದ ಉಂಟಾಗಬಹುದಾದ ಯಾವದಾದರೂ ನಷ್ಟದ ಮೊಬಲಗಿಗೂ ಭರ್ತೀ ಮಾಡಲ್ಪಡಬಹುದು. ಹಾಗೆ "ಬರಬೇಕಾದ ಬಾಕಿ ವ ನಷ್ಟದ ಮೊಬಲಗು ರೆವಿನ್ಯೂ ಕಂದಾಯದ ಬಾಕಿ ವಸೂಲೀ ಬಗ್ಯಾಗಿ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ, "ಲೈಸೆನ್ಸಿದಾರನಿಂದ ವಸೂಲ್ಮಾಡಲ್ಪಡತಕ್ಕದ್ದು. ಲೈಸೆನ್ಸಿದಾರನಿಂದ ಯಾವ ಸಬಬಿನ ಮೇಲಾಗಲಿ ಗುತ್ತಿಗೆ ಮೊಬಲಗಿನ ಯಾವ "ರಿಮಿಷರ್ಷ ಅಥವಾ ಕಮ್ಮಿ ಮಾಡುವಣವಾಗಲಿ ಯಾ ಈಡು ಮೊಬಲಗಾಗಲಿ ಕೇಳಲ್ಪಡಕೂಡದು."

"(3A.) ಬಾಕೀ ಬರಬೇಕಾದ ದರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ ಮತ್ತು ನಷ್ಟದ "ಮೊಬಲಗಿಗೆ ಪುನಶ್ಚ ಹರಾಜಾದ ತಾರೀಖಿನ ಲಾಗಾಯತು ಸಾಲಿಯಾನಾ ಶೇಕಡಾ 6ರ ಪ್ರಕಾರ ಆಗುವ ಬಡ್ಡೀ ದೇಖೀಲ್ ವಸೂಲ್ಮಾಡ "ಲ್ಪಡತಕ್ಕದ್ದು."

ನಂ. 3358.—ಯಕ್ಸೈ. 123, ಸ್ಯ 1895ನೇ ಡಿಸೆಂಬರ್ 11ನೇ ಮಾರ್ಕ್ಕಂ 5512.—ಯಕ್ಸೈ. 183ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ತಿದ್ದುಪಡಿಯಾದ ಮೇರೆ 1893ನೇ ಜನವರಿ 14ನೇ ಮಾರ್ಕ್ಕಂ 11813.—ಲೆ. ಫೈ. 233ನೇ ನಂಬರ್ ಇಸ್ತಿಹಾರ್‌ನಾಮೆ ಅನುಸರಿಸಿ, ಫಾಯಿಷ್ ಮಾಡಲ್ಪಟ್ಟ ರೂಲ್ಸಿನ Vನೇ ರೂಲ್ 6ನೇ ಕ್ಲಾಸಿನ (3)ನೇ ಸಬ್ ಕ್ಲಾಜಿಗೆ ಈ ಕೆಳಗೆ ಕಂಡದ್ದನ್ನ ಬದಲಾಗಿ ಶೇರಿಸಲ್ಪಡತಕ್ಕದ್ದೆಂದು ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ:—

" (3) ಲೈಸೆನ್ಸಿದಾರನಿಂದ ಹಾಜರ್ಮಾಡಲ್ಪಟ್ಟ ತೇವಣಿ ಮೊಬಲಗು, ಗುತ್ತಿಗೆ ವಾಯಿದೆಯ ಆಖೈರ್ ತಿಂಗಳು ಯಾ ತಿಂಗಳು "ಗಳಲ್ಲಿ ಹೊವತಿಯಾಗಬೇಕಾದ ಖಿಸ್ತುಗಳ ಬಾಕಿಗಾಗಿ, ತೆಗೆದುಕೊಳ್ಳಲ್ಪಡತಕ್ಕದ್ದು. ಪರಂತು ಮೇಲ್ಕಂಡ (2)ನೇ ಸಬ್ ಕ್ಲಾಜಿನ ನಿ "ಯಮಗಳನುಸರಿಸಿ, ಇಜಾರೆಯು ದುಸರಾ ಹರಾಜ್ ಯಾ ರದ್ದುಮಾಡಲ್ಪಟ್ಟಾಗ, ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮ್ಮಿಷನರವರ "ಯುಕ್ತಾನುಸಾರ ದಂಡವಾಗಿ ತೆಗೆದುಕೊಳ್ಳಲ್ಪಡಬಹುದು ಅಥವಾ ತಪ್ಪಿ ಹೋದ ಇಜಾರೆದಾರನಿಂದ ಬರಬೇಕಾದ ಬಾಕಿಗೂ ಮತ್ತು "ಇಜಾರೆಯು ಪುನಶ್ಚ ಹರಾಜ್ ಮಾಡಲ್ಪಟ್ಟದ್ದರಿಂದ ಉಂಟಾಗಬಹುದಾದ ಯಾವದಾದರೂ ನಷ್ಟದ ಮೊಬಲಗಿಗೂ ಉಸಯೋಗಿಸಲ್ಪ "ಡಬಹುದು. ಹಾಗೆ ಬರಬೇಕಾದ ಬಾಕಿ ವ ನಷ್ಟದ ಮೊಬಲಗು ರೆವಿನ್ಯೂ ಕಂದಾಯದ ಬಾಕಿ ವಸೂಲಿ ಬಗ್ಯಾಗಿ ಜಾರಿಯಲ್ಲಿರುವ "ರೂಲ್ಸ್ ಅನುಸರಿಸಿ, ಲೈಸೆನ್ಸಿದಾರನಿಂದ ವಸೂಲ್ಮಾಡಲ್ಪಡತಕ್ಕದ್ದು. ಲೈಸೆನ್ಸಿದಾರನಿಂದ ಯಾವ ಸಬಬಿನ ಮೇಲಾಗಲಿ ಗುತ್ತಿಗೆ ಮೊ "ಬಲಗಿನ ಯಾವ ರಿಮಿಷರ್ಷ ಅಥವಾ ಕಮ್ಮಿ ಮಾಡುವಣವಾಗಲಿ ಯಾ ಈಡು ಮೊಬಲಗಾಗಲಿ ಕೇಳಲ್ಪಡಕೂಡದು."

"(3 A.) ಬಾಕಿ ಬರಬೇಕಾದ ದರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ ಮತ್ತು ನಷ್ಟದ "ಮೊಬಲಗಿಗೆ ಪುನಶ್ಚ ಹರಾಜಾದ ತಾರೀಖಿನ ಲಾಗಾಯತು ಸಾಲಿಯಾನಾ ಶೇಕಡಾ 6ರ ಪ್ರಕಾರ ಆಗುವ ಬಡ್ಡೀ ದೇಖೀಲ್ ವಸೂಲ್ಮಾ "ಡಲ್ಪಡತಕ್ಕದ್ದು."

ಹುಕುಂ ಬಫೋಜೇಬ್,

ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟೆರಿ.